ಮೂಲ ದಾವಾ ಸಂಖ್ಯೆ. 127/2018 ಪಿ ಡಬ್ಲ್ಯೂ 1

(ದಿನಾಂಕ 09-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಕೆ ವಕೀಲರಿಂದಃ-

ನಾನು ಬಿ ಕಾಂ ಪದವೀಧರನಾಗಿದ್ದೇನೆ. ನಾನು ಕೋಳಿ ಫಾರಂ ನಲ್ಲಿ ಕೆಲಸ ಮಾಡುತ್ತೇನೆ. ನನಗೆ ಮ್ಯುಟೇಶನ್, ಪಹಣಿ, ಪಾಲುವಿಭಾಗ ಪತ್ರ, ಖರೀದಿ ಪತ್ರ ಇದರ ಬಗ್ಗೆ ಮಾಹಿತಿ ಇದೆ. ನನ್ನ ತಂದೆ ಮರಿಗೋಣೆಪ್ಪ ಎಂದರೆ ಸರಿ. ನನ್ನ ತಂದೆಯ ಸಹೋದರ ಹಾವಪ್ಪ ಎಂದರೆ ಸರಿ. ನನ್ನ ತಂದೆಯ ಸಹೋದರಿ ಬಸಮ್ಮ ಎಂದರೆ ಸರಿ. ನನ್ನ ತಂದೆ ಸನ್ 2003 ರಲ್ಲಿ ಮರಣ ಹೊಂದಿದ್ದಾರೆ. ನನ್ನ ದೊಡ್ಡಪ್ಪ 2000 ನೇ ಇಸ್ವಿಯಲ್ಲಿ ಮರಣ ಹೊಂದಿದ್ದಾರೆ. ನನ್ನ ತಾಯಿಯ ಹೆಸರು ತಾಯಮ್ಮ ಅವರು ಮರಣ ಹೊಂದಿದ್ದಾರೆ.

ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಸೇರಿ ಈಗ್ಗೆ ಸುಮಾರು 60 ವರ್ಷದ ಹಿಂದೆ ದಾವಾಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ನನ್ನ ತಂದೆಯವರು ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಯಾರಿಗೂ ಬರೆದುಕೊಟ್ಟಿರುವುದಿಲ್ಲ. ನಿಪಿ-4 ರಂತೆ ನಮ್ಮ ತಂದೆಯವರು ದಾವಾಸ್ತಿಗಳಿಗೆ ಸಂಬಂಧಿಸಿದಂತೆ 2 ಬಾರಿ ವ್ಯವಹಾರಗಳನ್ನು ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ 1 ನೇ ಆಸ್ತಿ ಸರ್ವೆ ನಂ.266 ಕ್ಕೆ ಸಂಬಂಧಿಸಿದಂತೆ ನನ್ನ ತಂದೆಯವರು ದಿಃ 21-07-1961 ರಂದು ಬಂಗಾರಿ ಗುಂಡಪ್ಪ ಎನ್ನುವವರಿಗೆ ಅಡಮಾನಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಇರಬಹುದು. ಸದರಿ ಜಮೀನನ್ನು ನನ್ನ ತಂದೆ ಮರಿಗೋಣೆಪ್ಪ ಇವರು ದಿಃ31-10-1963 ರಂದು ಪ್ರತಿವಾದಿಯರ ತಂದೆ ಹಾವಪ್ಪರವರಿಗೆ ರೂ.1500/- ಗಳಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಯವರು ಸದರಿ ಜಮೀನನ್ನು ಮಾರಾಟ ಮಾಡಿದ ನಂತರ ಪ್ರತಿವಾದಿ ನಂ.3 ಮತ್ತು 5 ರವರ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆಂದರೆ ಸರಿಯಲ್ಲ. ಸನ್ 1992-93 ರಲ್ಲಿ ಸದರಿ ಪ್ರತಿವಾದಿಯರ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆಂದರೆ ಸರಿಯಲ್ಲ. ಸದರಿ ಖಾತಾ ಬದಲಾವಣೆಗೆ ಮೇಲ್ಮನವಿ ಏನಾದರೂ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಖಾತಾ ಬದಲಾವಣೆಯಾಗುವ ಪೂರ್ವದಲ್ಲಿ ಒಂದು ತಕರಾರನ್ನು ನೀಡಿದ್ದೆವು ಎನ್ನುತ್ತಾರೆ. ಆ ತಕರಾರು ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಇಲ್ಲವೆನ್ನುವುದು ನನಗೆ ನೆನಪಿಲ್ಲ. ಸದರಿ ಖಾತಾ ಬದಲಾವಣೆ ಕುರಿತು ನಾನು ಮೇಲ್ಮನವಿಯನ್ನು ಸಲ್ಲಿಸಿಲ್ಲ. ನಿಮ್ಮ ತಂದೆಯವರು ಸನ್ 1963 ರಲ್ಲಿ ದಾವಾ 1 ನೇ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ತಂದೆಯ ಹೆಸರಿಗೆ ನೊಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟಿದ್ದಾರೆಂದರೆ ಸಾಕ್ಷಿಯು ಬರೆದುಕೊಟ್ಟಿರಬಹುದು, ನಮ್ಮ ತಂದೆಯವರು ಮಧ್ಯಪಾನ ಮಾಡುತ್ತಿದ್ದರು ಆ ಸಮಯದಲ್ಲಿ ಅವರಿಂದ ದಾಖಲೆ ಮಾಡಿಸಿಕೊಂಡಿರಬಹುದು ಎನ್ನುತ್ತಾರೆ. ಆ ರೀತಿ ನಾನು ನನ್ನ ವಾದಪತ್ರದಲ್ಲಿ ಹೇಳಿಲ್ಲ.

ಮೂಲ ದಾವಾ ಸಂಖ್ಯೆ. 127/2018 ಪಿ ಡಬ್ಲ್ಯೂ 1

ದಾವಾಸ್ತಿಗಳ ಸರ್ವೆ ನಂ. 266, 10 ಎಕರೆ 95 ಸೆಂಟ್ಸ, ಸರ್ವೆ ನಂ.158, 5.75 ಎಕರೆ, ಸರ್ವೆ ನಂ.179, 0.92 ಸೆಂಟ್ಸ, ಸರ್ವೆ ನಂ.128 ಬಿ, 1.80 ಎಕರೆ, ಸರ್ವೆ ನಂ.126, 2.03 ಎಕರೆ, ಸರ್ವೆ ನಂ.145 ಇ, 3.09 ಎಕರೆ, ಸರ್ವೆ ನಂ.145 ಜೆ, 1.44 ಎಕರೆ, ಸರ್ವೆ ನಂ.145 ಎಫ್/1, 1.86 ಎಕರೆ, ಸರ್ವೆ ನಂ.140 ಬಿ, 0.73 ಸೆಂಟ್ಸ ಸರ್ವೆ ನಂ.149 ಸಿ/1, 0.5 ಸೆಂಟ್ಸ ಇರುತ್ತದೆ. ನಮ್ಮ ಮನೆತನಕ್ಕೆ ಸೇರಿದ 3 ಮನೆಗಳಿದ್ದವು, ಒಂದು ನಮಗೆ ಬಂದಿದೆ, 2 ನಮ್ಮ ದೊಡ್ಡಪ್ಪನಿಗೆ ಹೋಗಿರುತ್ತವೆ. ನಮಗೆ ಬಂದಿರುವಂತಹ ಮನೆ ಡ್ಯಾಂನಲ್ಲಿ ಆಸ್ತಿ ಮುಳುಗಡೆಯಾದ ಬಗ್ಗೆ ಬಂದ ಮನೆಯಾಗಿರುತ್ತದೆ. ಸದರಿ ಮನೆಗಳನ್ನು ಯಾಕೆ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸಾಕ್ಷಿಯು ದಾಖಲೆಗಳನ್ನು ಹುಡುಕಲು ಆಗಲಿಲ್ಲವೆನ್ನುತ್ತಾರೆ. ಸನ್ 2018 ರಲ್ಲಿ 1 ಎಕರೆ ಜಮೀನು ಏನು ಬೆಲೆ ಬಾಳುತ್ತಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಮೇಲ್ಕಂಡ ಸರ್ವೆ ನಂಬರುಗಳು ಒಟ್ಟು ಎಷ್ಟು ಕ್ಷೇತ್ರವಾಗುತ್ತದೆನ್ನುವುದನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಜಮೀನುಗಳು ಒಟ್ಟು 27 ಎಕರೆ 72 ಸೆಂಟ್ಸ ಆಗುತ್ತದೆಂದರೆ ಇರಬಹುದು. ಎಲ್ಲಾ ಆಸ್ತಿಗಳು ಪ್ರತಿವಾದಿ ನಂ.3 ಮತ್ತು 5 ರವರ ಹೆಸರಿಗೆ ಇವೆ ಎಂದರೆ ಸಾಕ್ಷಿಯು ನಮ್ಮ ತಂದೆಯವರಿಗೆ ಬಂದಿಲ್ಲವಾದ್ದರಿಂದ ಅವರು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆನ್ನುತ್ತಾರೆ. ದಾವಾಸ್ತಿಗಳ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿಸ್ಸೆ ಇಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯರು ಯಾವ ಯಾವ ಬ್ಯಾಂಕಿನಲ್ಲಿ ಎಷ್ಟು ಸಾಲ ಮಾಡಿರುತ್ತಾರೆನ್ನುವುದು ನನ್ನ ಗಮನಕ್ಕೆ ಇಲ್ಲ. ಪ್ರತಿವಾದಿ ನಂ.3 ಮತ್ತು 5 ರವರ ಹೆಸರಿನಲ್ಲಿರುವ ಜಮೀನುಗಳಲ್ಲಿ ಅವರೇ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವೂ ಸಹಾ ಸ್ವಾಧೀನದಲ್ಲಿರುತ್ತೇವೆ ಎನ್ನುತ್ತಾರೆ. ನಾವು ಸರ್ವೆ ನಂ.266 ಮತ್ತು 128 ರಲ್ಲಿ ಸ್ವಾಧೀನದಲ್ಲಿರುತ್ತೇವೆ. ದಾವಾಸ್ತಿಗಳು ಪ್ರತಿವಾದಿಯರಿಗೆ ಸೇರಿರುತ್ತವೆ ಅಂತಾ ಗೊತ್ತಿದ್ದರೂ ಸಹಾ ದಾವಾಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ